# ಆಧುನಿಕೋತ್ತರ ಸಮಾಜ ಮತ್ತು ಕನ್ನಡ ಸಾಹಿತ್ಯದ ಪ್ರತಿಸ್ಪಂದನೆ

**ಅರುಂಧತಿ ಎಫ್. ಬದಾಮಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ.

DOI: https://doi.org/10.5281/zenodo.18701208

## ABSTRACT:

ಆಧುನಿಕತೆ 'ಹೊಸತು' ಎಂಬ ಅರ್ಥವನ್ನು ನೀಡಿದರೆ ಆಧುನಿಕೋತ್ತರವು ಈ ಹೊಸತಿನ ನಂತರದ 'ಪುನರ್ ಹೊಸತಿ'ನ ಕುರಿತಾದ ಚರ್ಚೆ. ಈ ಆಧುನಿಕತೆಯು ವಸಾಹತುಶಾಹಿಯ ಒಂದು ದೊಡ್ಡ ಕೊಡುಗೆ. ಈ ಆಧುನಿಕತೆಯು ಸರಿಯೋ ತಪ್ಪೋ ಎಂಬ ಜಿಜ್ಞಾಸೆಯಲ್ಲಿರುವ, ಅದನ್ನು ಸ್ವೀಕರಿಸಬೇಕೋ ಬೇಡವೋ ಎಂಬ ದ್ವಂದ್ವ, ಒತ್ತಡದಲ್ಲಿರುವಾಗಲೇ ನಾವುಗಳು ಈಗ ಆಧುನಿಕೋತ್ತರ ಕಾಲಘಟ್ಟವನ್ನು ಪ್ರವೇಶಿಸಿದ್ದೇವೆ. ಈ ಸಂದರ್ಭದಲ್ಲಿ ಉಂಟಾಗುತ್ತಿರುವ ಅನೇಕ ಬದಲಾವಣೆಗಳನ್ನು ಯಾವ ಚರ್ಚೆಗೆ ಒಳಪಡಿಸದೆ, ಒಳಪಡಿಸಿದರೂ ಕೇವಲ ಅದು ಚರ್ಚೆಗೆ ಮಾತ್ರ ಸೀಮಿತವಾಗುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಪರಂಪರೆ–ಆಧುನಿಕತೆ–ಆಧುನಿಕೋತ್ತರತೆಗಳು ಅನೇಕ ಸಂಘರ್ಷಗಳನ್ನು ಹುಟ್ಟುಹಾಕಿವೆ. ಕೌಟುಂಬಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ, ನೈತಿಕ, ಸಾಂಸ್ಕೃತಿಕ, ಗಂಡು–ಹೆಣ್ಣಿನ ಸಂಬಂಧದಲ್ಲಿ ಅನೇಕ ಸ್ಥಿತ್ಯಂತರಗಳು, ಬದಲಾವಣೆಗಳು ಉಂಟಾಗಿವೆ. ಈ ಪ್ರಕ್ರಿಯೆಯಲ್ಲಿ ಆಧುನಿಕೋತ್ತರ–ಆಧುನಿಕತೆ–ಪರಂಪರೆಗಳ ನಡುವಿನ ಕುತೂಹಲ, ತಿಕ್ಕಾಟ, ಎಚ್ಚರಿಕೆಯ ಸಂದೇಶ, ಸಂಘರ್ಷ, ಆತಂಕ ಇವು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಒಂದರ ಮೇಲೆ ಮತ್ತೊಂದು ಪ್ರಭಾವ ಬೀರುತ್ತ ಕಲಿಯುತ್ತಲೇ ಇರುತ್ತವೆ.

## KEYWORDS:

ಪರಂಪರೆ, ಆಧುನಿಕತೆ, ಆಧುನಿಕೋತ್ತರ, ಬಂಡವಾಳಶಾಹಿ ಜಗತ್ತು, ಜಾಗತೀಕರಣ, ತಾಯ್ತನದ ಹೊಸ ವ್ಯಾಖ್ಯಾನ, ಲಿವಿಂಗ್ ಟುಗೆದರ್, ಕೊರಿಯನ್ ಸ್ತ್ರೀವಾದ.

ಒಂದು ಕಾಲದಲ್ಲಿ ಭೂಮಿಯ ಮೇಲೆ ಪ್ರಾಣಿ ಸಮಾನವಾಗಿ ಬದುಕುತ್ತಿದ್ದ ಮನುಷ್ಯ ಇಂದು ಚಂದ್ರ, ಮಂಗಳ, ಸೂರ್ಯನಲ್ಲಿ ಸಂಶೋಧನೆ ಮಾಡುವಷ್ಟರ ಮಟ್ಟಿಗೆ ಬೆಳೆದು ನಿಂತಿದ್ದಾನೆ. ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದವನು ಇಂದು ಒಂದು ಕಡೆ ನೆಲೆಯೂರಿ ಗಗನಚುಂಬಿ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾನೆ. ವೈಜ್ಞಾನಿಕ, ತಾಂತ್ರಿಕ ಸಂಶೋಧನೆಯಿಂದಾಗಿ ಇಂದಿನ ಜಗತ್ತು ತೀರ ಸಂಕುಚಿತವಾಗಿ ಅಂಗೈಯಲ್ಲಿಯೇ ದೊರಕುತ್ತಿದೆ. ಸಂಪೂರ್ಣವಾಗಿ ಮಾನವ ಶ್ರಮ ಕೇಂದ್ರಿತವಾಗಿದ್ದ ಔದ್ಯೋಗಿಕ ರಂಗ ಈಗ ಯಂತ್ರ ಕೇಂದ್ರಿತವಾಗಿದೆ. ಸೌಲಭ್ಯಗಳ ಕೊರತೆಯಿಂದ ಹಿಂದೆ ಸಮಯ ವ್ಯರ್ಥವಾಗಿ ಪೋಲಾಗುತ್ತಿತ್ತೇನೋ ಎನಿಸಿದರೆ ಇಂದು ಕುಳಿತಲ್ಲೇ ಎಲ್ಲ ಸೌಲಭ್ಯಗಳು ಅಭಿವೃದ್ಧಿಯಾಗಿ ಮನುಷ್ಯನ ಬಾಹ್ಯ ಜಗತ್ತು ಎಷ್ಟು ಸುಖದಿಂದ ಕೂಡಿದೆಯೋ ಆತನ ಆಂತರಿಕ ಜಗತ್ತು ಈ ಸೌಲಭ್ಯಗಳಿಂದಾಗಿಯೇ ಅನೇಕ ರೀತಿಯ ತೊಂದರೆಗಳಿಗೆ ಒಳಗಾಗಿದೆ. ಹಿಂದಿನ ಕಾಲದ ಜನರಿಗೆ ಇದ್ದಂತ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಸುಖ–ಶಾಂತಿ, ನೆಮ್ಮದಿ ಇಂದಿನ ಆಧುನಿಕ, ಆಧುನಿಕೋತ್ತರ ಜೀವನ ಶೈಲಿಯಲ್ಲಿ ಬದುಕುತ್ತಿರುವವರಿಗೆ ಇಲ್ಲವಾಗಿ ಅವುಗಳನ್ನು ನವೀನ ರೀತಿಯಲ್ಲಿ ಹುಡುಕಿಕೊಂಡು ಹೋಗುತ್ತಿರುವುದು ಬದುಕಿನ ವಿಪರ್ಯಾಸ. ಯಂತ್ರಗಳ ಬೆನ್ನತ್ತಿ ಓಡುತ್ತಿರುವ ಇಂದಿನ ಮನುಷ್ಯರ ಬದುಕು ಯಾಂತ್ರಿಕವಾಗಿದೆ. ಕುಟುಂಬದಲ್ಲಿ ಪರಸ್ಪರ ಮಾತು, ನಗು, ಹರಟೆ,

ಕುಶಲೋಪರಿಗಳಿಗೆ ಸಮಯವೇ ಇಲ್ಲದಂತಾಗಿ ಅವುಗಳಿಗೂ ಸಮಯ ನಿಗದಿಪಡಿಸಿಕೊಳ್ಳುವಷ್ಟರ ಮಟ್ಟಿಗೆ ಇಂದಿನ ಮಹಾನಗರಗಳಲ್ಲಿ ವಾಸಿಸುವವರ ಜೀವನ ಬಂದು ನಿಂತಿದೆ. ಮಾನವ ಸಂಬಂಧದ ಗಟ್ಟಿತನ ಸಡಿಲವಾಗುತ್ತಿದೆ. ವ್ಯಾಪಾರಿ ಮನೋಭಾವ ಬೆಳೆಯುತ್ತಿದೆ. ಆದರೆ ಬದಲಾಗುತ್ತಿರುವ, ಓಡುತ್ತಿರುವ ಜೀವನ ಪದ್ಧತಿಗೆ ತಕ್ಕಂತೆ ಸಮಾಜ ಬದಲಾಗುವುದು ಅನಿವಾರ್ಯವಾಗಿದೆ. ಬದಲಾವಣೆ ಪ್ರಕೃತಿ ನಿಯಮ.

"ತನ್ನ ಸಮಾಜದಲ್ಲಿ ಆಗುತ್ತಿರುವ ಪರಿವರ್ತನೆಗಳಿಗೆ ತನ್ನ ಮೈಮನಗಳನ್ನು ತೆರೆದುಕೊಂಡವನ ಮನಸ್ಸು ವಿಕಸನಶೀಲವಾಗಿರುತ್ತದೆ. ಎಂದರೆ ಹೊಸ ಗ್ರಹಿಕೆಗಳಿಗೆ ಅನುಗುಣವಾಗಿ ಹೊಸ ಧೋರಣೆಗಳನ್ನು ರೂಪಿಸಿಕೊಳ್ಳುವುದು ಅಂತಹ ಮನಸ್ಸಿಗೆ ಸಾಧ್ಯವಾಗುತ್ತದೆ. ಅದರ ಬದಲು ತಾನು ಬಯಸುವ ಬದುಕೊಂದರ ಮಾದರಿಯನ್ನು ಗೃಹೀತವಾಗಿಟ್ಟುಕೊಂಡು ಎಲ್ಲ ಬದಲಾವಣೆಗಳನ್ನೂ ವಿಕೃತಿಯೆಂದು ತಿಳಿಯುವ ಮನಸ್ಸಿನ ಬೆಳವಣಿಗೆಯು ಸ್ಥಗಿತವಾಗಿರುತ್ತದೆ. ಹೆಚ್ಚೆಂದರೆ ಅದು ಬದಲಾವಣೆಗಳನ್ನು Patronizing ಆದ ಸಹಾನುಭೂತಿಯಿಂದ ಪರಿಶೀಲಿಸಿ ಅವು ಮಾನವ ಸಹಜ ದೌರ್ಬಲ್ಯಗಳೆಂದು ಒಪ್ಪಿಕೊಳ್ಳಬಹುದು. ಆದ್ರೆ ಒಳಗೆಲ್ಲೋ ಅಂತಹ ಮನಸ್ಸಿನ ತುಡಿತವಿರುವುದು ತಾನು ಮೆಚ್ಚಿಕೊಂಡಿರುವ ಮೂಲ ಮಾದರಿಯ ಪುನರಾಗಮನದ ಕಡೆಗೆ"[1] ಆದುದರಿಂದ ಸಾಮಾಜಿಕ ಆರೋಗ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಬದಲಾವಣೆಗಳನ್ನು ಒಪ್ಪಿಕೊಳ್ಳುವುದರಲ್ಲಿ ಹಿತವಿದೆ. ಹಾಗೆಯೇ "ಬದಲಾವಣೆ ಮತ್ತು ಪ್ರಗತಿಶೀಲತೆಗಳು ಇತಿಹಾಸದ ಮುಖ್ಯ ಲಕ್ಷಣಗಳು. ಈ ಸಂಗತಿಯ ಸತ್ಯ ಆಧುನಿಕ ಮನುಷ್ಯನ ಮನಸ್ಸನ್ನೆಲ್ಲ ಆವರಿಸಿಕೊಂಡು ಪ್ರಗತಿಯ ಹೊಸ ತತ್ವವನ್ನು ರೂಢಿಗೆ ತಂದಿದೆ."[2]

ಅತೀ ಹೆಚ್ಚು ಪರಕೀಯರ ಆಕ್ರಮಣಕ್ಕೆ ತುತ್ತಾಗುತ್ತಲೇ ಬಂದಿರುವ ನಮ್ಮ ದೇಶದ ಮೇಲೆ ಯಾವ ಸಾಮ್ರಾಜ್ಯಾಧಿಪತ್ಯವೂ ಮಾಡದಷ್ಟು ಪರಿಣಾಮವನ್ನು, ಪ್ರಭಾವವನ್ನು ಬ್ರಿಟಿಷ ಆಧಿಪತ್ಯ ಮಾಡಿತು. ಸುಮಾರು ಮುನ್ನೂರು ವರ್ಷಗಳ ಕಾಲ ಆಳಿದ ಬ್ರಿಟಿಷರ ಪ್ರಭಾವ ಅವರು ನಮ್ಮ ದೇಶದಿಂದ ಹೋಗಿ ಮುಕ್ಕಾಲು ಶತಮಾನವೇ ಸಂದಿದ್ದರೂ ಕಡಿಮೆಯಾಗಿಲ್ಲ. ಅವರ ಇಂಗ್ಲಿಷ ಭಾಷೆ ಒಂದು ಭಾಷೆಯಾಗಿ ಮಾತ್ರ ಉಳಿದುಕೊಳ್ಳದೇ, ಒಂದು ಪ್ರಖರ, ಪ್ರಮುಖ ಮಾಧ್ಯಮವಾಗಿ ಜನರ ಮೇಲೆ ಪ್ರಭಾವ ಬೀರಿತು. ಪ್ರತಿಷ್ಠೆಯ ಜಾಗತಿಕ ಭಾಷೆಯಾಗಿ ಇಂದಿಗೂ ಜನರ ಮೇಲೆ ತನ್ನ ಪ್ರಭಾವವನ್ನು ಬೀರಿ ಭಾರತೀಯರಿಗೆ ಹೊಸ ಅಸ್ತಿತ್ವವನ್ನೇ ನೀಡಿದೆ. ಬ್ರಿಟಿಷರು ರೂಪಿಸಿದ ಅನೇಕ ವೈಚಾರಿಕ, ಪ್ರಗತಿಪರ ಯೋಜನೆಗಳಿಂದಾಗಿ ಭಾರತವು ಬಹಳಷ್ಟು ಪ್ರಗತಿಯನ್ನು ಸಾಧಿಸಿತು. ಅನೇಕ ದೇಶಗಳ ಸಂಸ್ಕೃತಿ, ಸಂಪರ್ಕದಿಂದಾಗಿ ಸಾಂಪ್ರದಾಯಿಕ ಆಚಾರ–ವಿಚಾರಗಳಲ್ಲಿ, ಉಡಿಗೆ–ತೊಡಿಗೆಗಳಲ್ಲಿ, ರೀತಿ–ನೀತಿಗಳಲ್ಲಿ ಒಟ್ಟಾರೆ ಜೀವನ ಕ್ರಮದಲ್ಲಿಯೇ ಬದಲಾವಣೆಯಾಗುತ್ತ ಬಂದಿತು. ಪ್ರತಿಯೊಂದನ್ನು ವಿಶ್ಲೇಷಿಸಿ, ವಿಮರ್ಶಿಸಿ ನಂತರವೇ ಒಪ್ಪಿಕೊಳ್ಳುವ ವೈಚಾರಿಕತೆ ಬೆಳೆಯತೊಡಗಿತು. ಇದರ ಜೊತೆಗೆ ಅನೇಕ ಸಾಂಪ್ರದಾಯಿಕ ಆಚಾರ–ವಿಚಾರಗಳು ಕ್ಷೀಣವಾಗುತ್ತಾ ಬಂದವು. "ಏಷಿಯಾ ಆಫ್ರಿಕಾ ಖಂಡಗಳಿಗೆ ಆಧುನಿಕತೆ ಕಾಲಿಟ್ಟಿದ್ದು ವಸಾಹತುಶಾಹೀ ಆಡಳಿತದ ಮೂಲಕ. ಏಷಿಯಾ ಮತ್ತು ಆಫ್ರಿಕಾ ಖಂಡಗಳಿಗೆ ಆಧುನಿಕತೆ ಹೊರಗಿನಿಂದ ಬಂದದ್ದರಿಂದ ಉಂಟಾದ ಪರಿಣಾಮಗಳು ತುಂಬಾ ಸಂಕೀರ್ಣವಾಗಿವೆ."[3] ಹೀಗಾಗಿ ವಸಾಹತುಶಾಹಿ ತಂದ ಹೊಸ ಮೌಲ್ಯಗಳಿಗೆ ನಮ್ಮ ಸಮಾಜದ ಪ್ರತಿಕ್ರಿಯೆ ಏಕರೀತಿಯದಾಗಿರಲಿಲ್ಲ. ನಮ್ಮ ಬಹುಮುಖೀ ಸಂಸ್ಕೃತಿಯು ವ್ಯಕ್ತಪಡಿಸಿದ ಪ್ರತಿಕ್ರಿಯೆಯೂ ಬಹುರೂಪಿಯಾಗಿತ್ತು. ಕೆಲವು ಬದಲಾವಣೆಗಳು ನಮ್ಮನ್ನು ತಲ್ಲಣಗೊಳಿಸಿದರೆ ಮತ್ತೆ ಕೆಲವು ಒಂದು ಬಗೆಯ ವಿಮೋಚನೆಯ ಭಾವವನ್ನು

ಉಂಟು ಮಾಡಿದವು. ಕೆಲವನ್ನು ಸ್ವಾಗತಿಸಿದರೆ ಮತ್ತೆ ಕೆಲವನ್ನು ಉಗ್ರವಾಗಿ ಪ್ರತಿಭಟಿಸಲಾಯಿತು. ಸ್ವಾಗತ–ರಾಜಿ–ಸಂಘರ್ಷಗಳ ಡಯಲೆಕ್ಟಿಕ್‌ನಲ್ಲಿ ನಮ್ಮ ಲೇಖಕರು ಈ ವಾಸ್ತವತೆಯನ್ನು ಗ್ರಹಿಸಬೇಕಾಯಿತು. ದೇಶೀಯ ಸಂಸ್ಕೃತಿ ಮತ್ತು ಪರಕೀಯ ಸಂಸ್ಕೃತಿಗಳ ಮುಖಾಮುಖಿಯ ಸ್ವರೂಪ ಈ ಐತಿಹಾಸಿಕ ವಾಸ್ತವತೆಯ ಒಂದು ಮುಖವಾಗಿದ್ದರೆ, ಇನ್ನೊಂದು ನಿಟ್ಟಿನಲ್ಲಿ ನಮ್ಮ ಸಮಾಜದ ಒಳಗೂ ಚಲನೆ ಪ್ರಾರಂಭವಾಯಿತು. ಸುಧಾರಣಾವಾದೀ ಚಳುವಳಿಗಳು ಹುಟ್ಟಿಕೊಂಡವು. ತನ್ನ ಒಳಗಿನ ಅನೇಕ ಹುಳುಕುಗಳನ್ನು ಮನಗಂಡ ಸಮಾಜ ತನ್ನನ್ನು ತಾನೇ ತಿದ್ದಿಕೊಳ್ಳುವ ಪರಿಷ್ಕರಿಸಿಕೊಳ್ಳುವ ಕ್ರಿಯೆಯಲ್ಲೂ ಮುಂದಾಯಿತು”[4]

ಆಧುನಿಕತೆ 'ಹೊಸತು' ಎಂಬ ಅರ್ಥವನ್ನು ನೀಡಿದರೆ ಆಧುನಿಕೋತ್ತರವು ಈ ಹೊಸತಿನ ನಂತರದ 'ಪುನರ್ ಹೊಸತಿ'ನ ಕುರಿತಾದ ಚರ್ಚೆ. ಗುರುಕುಲದಲ್ಲಿ ಸಂಸ್ಕೃತ ಅಧ್ಯಯನವನ್ನು ಮಾಡುತ್ತಿದ್ದ ಗುಂಪು ವಸಾಹತೋತ್ತರ ಭಾರತದಲ್ಲಿ ಇಂಗ್ಲಿಷ್ ಅಧ್ಯಯನವನ್ನು ಮಾಡಲು ತಯಾರಾಗುವುದು ಆಧುನಿಕತೆಯನ್ನು ಸೂಚಿಸಿದರೆ ವರ್ಗಾತೀತವಾಗಿ, ಜಾತ್ಯಾತೀತವಾಗಿ, ಧರ್ಮಾತೀತವಾಗಿ, ಲಿಂಗಾತೀತವಾಗಿ ಎಲ್ಲರೂ ಯಾವ ಮಡಿವಂತಿಕೆಯಿಲ್ಲದೆ ಇಂಗ್ಲಿಷ್ ಅಧ್ಯಯನ ಮಾತ್ರವಲ್ಲ ಉನ್ನತವಿದ್ಯಾಭ್ಯಾಸವನ್ನು ಮಾಡುವುದಿದೆಯಲ್ಲ ಅದು ಆಧುನಿಕೋತ್ತರ ಬದಲಾವಣೆ. ಈ ಆಧುನಿಕತೆಯು ವಸಾಹತುಶಾಹಿಯ ಒಂದು ದೊಡ್ಡ ಕೊಡುಗೆ. ಈ ಆಧುನಿಕತೆಯು ಸರಿಯೋ ತಪ್ಪೋ ಎಂಬ ಜಿಜ್ಞಾಸೆಯಲ್ಲಿರುವ, ಅದನ್ನು ಸ್ವೀಕರಿಸಬೇಕೋ ಬೇಡವೋ ಎಂಬ ದ್ವಂದ್ವ, ಒತ್ತಡದಲ್ಲಿರುವಾಗಲೇ ನಾವುಗಳು ಈಗ ಆಧುನಿಕೋತ್ತರ ಕಾಲಘಟ್ಟವನ್ನು ಪ್ರವೇಶಿಸಿದ್ದೇವೆ. ಈ ಸಂದರ್ಭದಲ್ಲಿ ಉಂಟಾಗುತ್ತಿರುವ ಅನೇಕ ಬದಲಾವಣೆಗಳನ್ನು ಯಾವ ಚರ್ಚೆಗೆ ಒಳಪಡಿಸದೆ, ಒಳಪಡಿಸಿದರೂ ಕೇವಲ ಅದು ಚರ್ಚೆಗೆ ಮಾತ್ರ ಸೀಮಿತವಾಗುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ.

ಪರಂಪರೆ–ಆಧುನಿಕತೆ–ಆಧುನಿಕೋತ್ತರತೆಗಳು ಅನೇಕ ಸಂಘರ್ಷಗಳನ್ನು ಹುಟ್ಟುಹಾಕಿವೆ. “ಆಧುನಿಕತೆ ಎನ್ನುವುದು ಒಂದು ನಕ್ಷತ್ರಪುಂಜವಿದ್ದ ಹಾಗೆ. ದೂರದಿಂದ ಅದು ಒಂದೇ ಎಂಬಂತೆ ಕಂಡರೂ, ಒಳಹೊಕ್ಕು ನೋಡಿದಾಗ ಅದರ ವಿಶ್ವರೂಪ ಬೆರಗುಗೊಳಿಸುವಂತಹದ್ದು”[5] ಕೌಟುಂಬಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ, ನೈತಿಕ, ಸಾಂಸ್ಕೃತಿಕ, ಗಂಡು–ಹೆಣ್ಣಿನ ಸಂಬಂಧದಲ್ಲಿ ಅನೇಕ ಸ್ಥಿತ್ಯಂತರಗಳು, ಬದಲಾವಣೆಗಳು ಉಂಟಾಗಿವೆ. ಈ ಪ್ರಕ್ರಿಯೆಯಲ್ಲಿ ಆಧುನಿಕೋತ್ತರ–ಆಧುನಿಕತೆ–ಪರಂಪರೆಗಳ ನಡುವಿನ ಕುತೂಹಲ, ತಿಕ್ಕಾಟ, ಎಚ್ಚರಿಕೆ, ಸಂಘರ್ಷ, ಆತಂಕ ಇವು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಒಂದರ ಮೇಲೆ ಮತ್ತೊಂದು ಪ್ರಭಾವ ಬೀರುತ್ತ ಕಲಿಯುತ್ತಲೇ ಇರುತ್ತವೆ. “ಪರಂಪರೆಯೇ ಶ್ರೇಷ್ಠ–ಆಧುನಿಕತೆ ನೀಚ, ಪರಂಪರೆ ಒಳಿತು–ಆಧುನಿಕತೆ ಕೆಡಕು, ಪರಂಪರೆ ಗಟ್ಟಿ–ಆಧುನಿಕತೆ ದುರ್ಬಲ”[6] ವೆಂಬ ಸರಳ ವರ್ಗೀಕರಣವನ್ನು ಮಾಡಲು ಸಾಧ್ಯವಿಲ್ಲ. ಏಕೆಂದರೆ ಆಧುನಿಕತೆ ಎನ್ನುವುದು ಕೇವಲ ಯೋಚನಾ ಲಹರಿಯಲ್ಲ. “ಅನುಕರಣೆಯಲ್ಲ. ಅದು ಅಲೋಚನೆಯ ಒಂದು ಪ್ರಕ್ರಿಯೆ. ಜೀವನ ವಿಧಾನದ ಮಾರ್ಪಾಡಾಗಿದೆ.”[7]

ಆಧುನಿಕೋತ್ತರ ಚಿಂತನೆಗಳು, ಸಂವೇದನೆಗಳು ಸಮಾಜದಲ್ಲಿ ರೂಢಿಗೆ ಬಂದಾಗ ಅವು ಸಾಹಿತ್ಯದಲ್ಲೂ ಚರ್ಚೆಗೆ ಒಳಪಟ್ಟಿವೆ. ಏಕೆಂದರೆ ಸಾಹಿತ್ಯ, ಸಾಮಾಜಿಕ ಚಳುವಳಿಯ ಮೇಲೆ ಪ್ರಭಾವ ಬೀರಿದರೆ, ಸಾಮಾಜಿಕ ಚಳುವಳಿ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ. ಅನೇಕ ಸಲ ಆರೋಗ್ಯಕರ ಸಾಮಾಜಿಕ ಬದಲಾವಣೆಗೆ ಸಾಹಿತ್ಯಿಕ ಚಳುವಳಿಯೇ ಮೂಲ

ಆಕರವಾಗಿದೆ. ಸಾಹಿತ್ಯ ಮತ್ತು ಸಮಾಜ ಒಂದರ ಪ್ರತಿಬಿಂಬ ಮತ್ತೊಂದು. ಹೀಗೆ ಸಾಹಿತ್ಯ ಆಯಾ ಸಂದರ್ಭಗಳಿಗೆ ಪ್ರತಿಸ್ಪಂದಿಸುತ್ತಲೇ ಬಂದಿದೆ. ಆದರೂ "ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದಂತೆ 'ಪ್ರಾಚೀನ' 'ಆಧುನಿಕ' ಎಂಬ ಪರಿಭಾಷೆಗಳು ನಾವು ಊಹಿಸಿದಷ್ಟು ಸರಳವಾಗಿಲ್ಲ. ಅವು ಕೇವಲ ಕಾಲಸೂಚಕ ಪರಿಕಲ್ಪನೆಗಳಾಗಿಲ್ಲ. ಕೇವಲ ಭಾಷಾಶೈಲಿಗೆ ಸಂಬಂಧಿಸಿದ ರೂಪಬದ್ಧ ಪರಿಭಾಷೆಗಳೂ ಆಗಿಲ್ಲ. ಜತೆಗೆ ಸಂವೇದನೆ ಬದ್ಧವಾದ ಪರಿಭಾಷೆಗಳೂ ಆಗಬಲ್ಲವು"[8] ಎಂಬ ರಹಮತ್ ತರೀಕೆರೆಯವರ ಮಾತು ಗಮನಾರ್ಹವಾದುದು.

ಆದರೂ ಈ ಸಂದರ್ಭದಲ್ಲಿ ಸಾಹಿತ್ಯಿಕ ವಲಯದಲ್ಲಿ ಈ ಹಿಂದೆ ತಮ್ಮ ಅನುಭವವನ್ನು ಬರೆಯಲು ಹೇಳಲು ಹಿಂಜರಿಕೆ ಹಾಕುತ್ತಿದ್ದವರೂ ಇಂದು ಎಲ್ಲ ವಿಷಯಗಳ ಬಗೆಗೂ ಮುಕ್ತವಾಗಿ ಮಾತನಾಡುತ್ತಿದ್ದಾರೆ. ಚರ್ಚಿಸುತ್ತಿದ್ದಾರೆ. ಮಹಿಳೆಯರೂ ಇದಕ್ಕೆ ಹೊರತಲ್ಲ. ಸಮಾಜದಲ್ಲಿ ಈ ಹಿಂದೆ ಆಗಿ ಹೋದ ಈಗ ಆಗುತ್ತಿರುವ ಅನೇಕ ವಿಷಯಗಳ ಕುರಿತಾಗಿ ಸಾಹಿತ್ಯದ ಮುಖೇನ, ಆಧುನಿಕೋತ್ತರದ ಕೊಡುಗೆಗಳಾದ ಸಾಮಾಜಿಕ ಜಾಲತಾಣಗಳ ಮುಖೇನ ಗಂಭೀರವಾಗಿ ಮುಕ್ತವಾಗಿ ಚರ್ಚಿಸುತ್ತಾರೆ. ಇದಕ್ಕೆ ಉದಾಹರಣೆ 'ಮಿ ಟೂ ಅಭಿಯಾನ'. ಜಾಗತಿಕ ಮಟ್ಟದಲ್ಲಿ ಬಹು ದೊಡ್ಡದಾಗಿ ನಡೆದ ಅಭಿಯಾನ. ಆಧುನಿಕೋತ್ತರ ಸಮಾಜದಲ್ಲಿ ಸ್ತ್ರೀಯರು ತಮಗಾದ ದೌರ್ಜನ್ಯವನ್ನು ಯಾವ ಮುಜುಗರ, ಭಯ, ಆತಂಕವಿಲ್ಲದೆ ನಿರ್ಭೀತಿಯಿಂದ ಅಭಿವ್ಯಕ್ತ ಪಡಿಸಿದ್ದಾರೆ. ಅಷ್ಟೇ ಅಲ್ಲ, ಮಹಿಳೆ ತನ್ನ ಗೌರವಕ್ಕೆ ಧಕ್ಕೆ ಬಂದಾಗ ತನ್ನ ಮುಗ್ಧತೆಯನ್ನು ಮೀರಿ ಸಮಾಜ ತನ್ನ ಕುರಿತು ಏನೆಂದುಕೊಳ್ಳಬಹುದೆನ್ನುವ ಆತಂಕವನ್ನು ದಾಟಿ ಈ ಪೂರ್ವದಲ್ಲಿಯೇ ದನಿಯೆತ್ತಬೇಕಾಗಿದ್ದರ ಅವಶ್ಯಕತೆಯನ್ನು ಕುಮುದುವಲ್ಲಿ ಅರುಣಕುಮಾರ ಅವರು 'ಮೀಟೂ' ಕವನದಲ್ಲಿ "ಕೆಕ್ಕರಿಸಿ ನೋಡುವಾಗಲೇ ಏಟುಕೊಟ್ಟು ಕಿರುಚಬೇಕಿತ್ತು..... ಟೈಪಿಂಗ್ ಇನ್ಸಟ್ಯೂಟು, ಕಾಲೇಜು ಕ್ಯಾಂಪಸ್, ಗೇಟು/ ಬಸ್ ಸ್ಟ್ಯಾಂಡು ಸೀಟು/ ಆಫೀಸಿನ ಇನ್ ಆ್ಯಂಡ್ ಔಟು/ ಅಲ್ಲಿ ಮುಟ್ಟು ಇಲ್ಲಿ ಮುಟ್ಟು ಎಲ್ಲೆಲ್ಲೋ ನೋಟ ನೆಟ್ಟು/ ಕೆಕ್ಕರಿಸಿ ನೋಡುವಾಗಲೇ ಏಟುಕೊಟ್ಟು/ ಕಿರುಚಬೇಕಿತ್ತು ಮೀಟೂ/ ಏಜು ಎಷ್ಟಾದರೇನು ಅವರಿಗೆ ಮೋಜೇ ಪ್ರಾಮಿನೆಂಟು/ ಫೀ 'ಮೇಲ್' ಮೇಲಿನ ಹೆರಾಸ್ಮಂಟು/ ಆಗಬಾರದು ಪರ್ಮನೆಂಟು/ ಅನ್ನೋ ಹಾಗಿದ್ರೆ/ ಮೀ ಟೂ..... ಮೀ ಟೂ..... ಮೀ ಟೂ.....

ಇದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ಕಾಣಿಸಿಕೊಂಡಿರುವ 'ಕೊರಿಯನ್ ಸ್ತ್ರೀವಾದದ ಪರಿಕಲ್ಪನೆ' ನಮ್ಮಲ್ಲಿಯೂ ನಿಧಾನವಾಗಿ ಲಗ್ಗೆ ಇಡುತ್ತಿದೆ. 4Bಗಳ ಮೂಲಕ ಇದನ್ನು ಪ್ರಸ್ತಾಪಿಸುತ್ತಾರೆ. ಇದು ಪುರುಷ ಪ್ರಧಾನ ಸಂಸ್ಕೃತಿಯ ವಿರೋಧ ಮತ್ತು ಸೌಂದರ್ಯದ ಮಾನದಂಡಗಳ ವಿರುದ್ಧದ ಹೋರಾಟವಾಗಿದೆ. "ಎಸ್ಕೇಪ್ ದ ಕಾರ್ಸೆಟ್" (Escape the Corset) ಮತ್ತು 4B ಚಳುವಳಿಗಳ ಮೂಲಕ ಮಹಿಳೆಯರು ಮೇಕಪ್, ಮದುವೆ, ಹೆರಿಗೆ ಮತ್ತು ಡೇಟಿಂಗ್ ಅನ್ನು ತಿರಸ್ಕರಿಸಿ ಸ್ವಾವಲಂಬನೆಯನ್ನು ಪ್ರತಿಪಾದಿಸುತ್ತಿದ್ದಾರೆ. ಇದು ಮೀಟೂ ಚಳುವಳಿಯ ನಂತರ ಬಲಗೊಂಡಿದೆ. 2015–2016 ರಲ್ಲಿ ಆರಂಭವಾದ ಈ ಚಳುವಳಿಯು, ಅತಿಯಾದ ಮೇಕಪ್, ಹತ್ತು ಹಂತದ ತ್ವಚೆಯ ಆರೈಕೆ ಮತ್ತು ಸೌಂದರ್ಯ ಶಸ್ತ್ರಚಿಕಿತ್ಸೆಗಳಂತಹ ಸಾಮಾಜಿಕ ಒತ್ತಡಗಳನ್ನು 'ಕಾರ್ಸೆಟ್'(ಬಂಧನ) ಎಂದು ಕರೆದು ಅದನ್ನು ಮುರಿಯಲು ಕರೆ ನೀಡಿತು. Bi ಎಂದರೆ ಕೊರಿಯನ್ ಭಾಷೆಯಲ್ಲಿ ಇಲ್ಲ ಎಂದು ಅರ್ಥ. ಈ ಚಳುವಳಿಯ ಮೂಲಕ ಮದುವೆ ಬೇಡ (Bihon), ಡೇಟಿಂಗ್ ಬೇಡ (Biyeonae), ಹೆರಿಗೆ ಬೇಡ (Bichulsan), ಲೈಂಗಿಕ ಸಂಬಂಧ ಬೇಡ (Bisekseu)

ಇದರ ಪರಿಣಾಮ ದಕ್ಷಿಣ ಕೊರಿಯಾದಲ್ಲಿ ಕಡಿಮೆ ವಿವಾಹದರ ಮತ್ತು ವಿಶ್ವದಲ್ಲೇ ಅತೀ ಕಡಿಮೆ ಫಲವತ್ತತೆಯ ದರ ದಾಖಲಾಗಿದೆ. ಇದು ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಯನ್ನು ತೋರಿಸುತ್ತದೆ. ದಕ್ಷಿಣ ಕೊರಿಯಾದ ಈ ಸ್ತ್ರೀವಾದಿ ಚಳುವಳಿಯು ಮಹಿಳೆಯರ ಗುರುತನ್ನು ಪುರುಷ ಪ್ರಧಾನ ಸಮಾಜದ ಮಿತಿಗಳಿಂದ ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದೆ.''

ಆಧುನಿಕೋತ್ತರ ಕಾಲಘಟ್ಟದ ಕನ್ನಡ ಸಾಹಿತ್ಯವನ್ನು ಸಾಂಪ್ರದಾಯಿಕ ಶಿಕ್ಷಣ ಮಾತ್ರವಲ್ಲದ ವೃತ್ತಿಶಿಕ್ಷಣವನ್ನು ಪಡೆದ ತಾಂತ್ರಿಕ, ವೈದ್ಯಕೀಯ ಮತ್ತು ವಿಜ್ಞಾನ ಶಿಕ್ಷಣವನ್ನು ಪಡೆದ ಸಾಕಷ್ಟು ಲೇಖಕರು ಇಂದು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದಾರೆ. ಸಾಹಿತ್ಯದ ಮುಖೇನ ಅಲ್ಲಿಯ ಹೊಸ ಜಗತ್ತನ್ನು ತೆರೆದಿಡುತ್ತಿದ್ದಾರೆ. ಆಧುನಿಕೋತ್ತರ ಕಾಲಘಟ್ಟದಲ್ಲಿ ವಿಜ್ಞಾನ ಮಹಿಳೆಯರಿಗೆ ಹೊಸ ಜಗತ್ತನ್ನು ಪರಿಚಯಿಸಿದೆ. ಆದರೆ ಈ ಪೂರ್ವದಲ್ಲಿ ವಿಜ್ಞಾನ ಮಹಿಳೆಯರ ಮೇಲೆ ಹೊರಿಸಿದ ಪೂರ್ವಾಗ್ರಹ ಪೀಡಿತ ನಿಲುವುಗಳು ವಿಜ್ಞಾನ ಎನ್ನುವ ಪದಕ್ಕೆ ಕಳಂಕಿತ ರೂಪದಲ್ಲಿವೆ. ಸ್ತ್ರೀವಾದಿ ಚಿಂತಕರು ಅಂತಹ ಅಪಥ್ಯ ವಿಚಾರವನ್ನು ಬಯಲಿಗೆಳೆದಿದ್ದು, ಮತ್ತು ಮಹಿಳೆಯರ ಮೇಲೆ ವಿಜ್ಞಾನದ ಸಾಧಕ–ಬಾಧಕಗಳ ಕುರಿತು ನೇಮಿಚಂದ್ರ ಅವರು 'ಮಹಿಳೆ ಮತ್ತು ವಿಜ್ಞಾನ' ಲೇಖನದಲ್ಲಿ ವಿಸ್ತೃತವಾಗಿ ವಿವರಿಸಿದ್ದಾರೆ. ''ಕಳೆದೆರಡು ದಶಕಗಳಲ್ಲಿ ಸ್ತ್ರೀವಾದಿಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ಪುರುಷರ ಏಕಸ್ವಾಮ್ಯತೆಯೇ ಅವರ ಶಕ್ತಿಯ ಮೂಲ ಕಾರಣವಾಗಿದೆ ಎಂದು ಗುರುತಿಸಿದ್ದಲ್ಲದೇ, ಮಹಿಳೆಯ ಅವಲಂಬಿತ ಸ್ಥಿತಿಗೆ ಆಕೆ ವಿಜ್ಞಾನದಿಂದ ಹೊರಗುಳಿದಿದ್ದೂ, ತಾಂತ್ರಿಕ ನೈಪುಣ್ಯ ಗಳಿಕೆಯ ಅವಕಾಶಗಳಿಂದ ವಂಚಿತಳಾಗಿದ್ದು ಒಂದು ಮುಖ್ಯ ಕಾರಣ ಎಂದು ಕಂಡುಕೊಂಡರು''[9] ಆಧುನಿಕೋತ್ತರ ಭಾರತದಲ್ಲಿ ಸ್ತ್ರೀವಾದಿಗಳು ಮಂಡಿಸಿದ ಈ ವಿಚಾರಗಳನ್ನು ಪುರುಷಾಧಿಪತ್ಯ ಒಪ್ಪಿಕೊಳ್ಳಲೇಬೇಕಾಗಿದೆ. ಸ್ತ್ರೀಕುಲ ತಮ್ಮ ಹಿಂದುಳಿಯುವಿಕೆಗೆ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ದೂರವುಳಿದಿದ್ದು ಒಂದು ಕಾರಣವೆಂದು ಅರಿತುಕೊಂಡದ್ದೇ ತಡ ಅದರಲ್ಲಿಯೂ ಮಹಿಳೆಯರು ಕಾಲಿಡುತ್ತಿದ್ದಾರೆ. ಮಾತ್ರವಲ್ಲ ಅಲ್ಲಿಯ ಸತ್ಯಾಸತ್ಯತೆಗಳನ್ನೆಲ್ಲ ನಿರ್ಭೀತಿಯಾಗಿ ಬರೆಯುತ್ತಿದ್ದಾರೆ. ವೈದ್ಯಕೀಯ ಪ್ರಯೋಗಶೀಲತೆಗೆ ಒತ್ತಾಯ ಪೂರ್ವಕವಾಗಿ ಬಳಸಿಕೊಳ್ಳುವುದನ್ನು ಕಂಡ ಹೊಸ ತಲೆಮಾರು ಅದನ್ನು ನಿರಾಕರಿಸುತ್ತದೆ. ಮತ್ತು ಹೆಣ್ಣಿನ ದೇಹವನ್ನು ವೈದ್ಯಕೀಯ ರಂಗದಲ್ಲಿ ಒತ್ತಾಯಪೂರ್ವಕವಾಗಿ ಪ್ರಯೋಗಶಾಲೆಗೆ ಒಳಪಡಿಸುವುದನ್ನು ವಿರೋಧಿಸಿದರಲ್ಲದೆ, ಆಕೆಗೆ ಆಯ್ಕೆಯ ಸ್ವಾತಂತ್ರ್ಯವಿದೆ ಎಂಬುದನ್ನು ಒತ್ತಿ ಹೇಳಿದರು.

ವಿಜ್ಞಾನದ ಬಹು ದೊಡ್ಡ ಕೊಡುಗೆ ತಾಯ್ತನಕ್ಕೆ ಸಂಬಂಧಿಸಿದ ಹೊಸ ಆವಿಷ್ಕಾರಗಳು. ಇದರ ಪರಿಣಾಮ ತಾಯ್ತನದ ಹೊಸ ವ್ಯಾಖ್ಯಾನ. ಈ ಹೊಸ ವ್ಯಾಖ್ಯಾನವು ಆಧುನಿಕೋತ್ತರ ಭಾರತದಲ್ಲಿ ಹೊಸ ಸಂಚಲನವನ್ನೇ ಮೂಡಿಸಿದೆ. ಮಕ್ಕಳಾಗದ ಸ್ತ್ರೀ ಈಗ ಬಾಡಿಗೆ ತಾಯಿಯಿಂದಲೂ ತನ್ನದೇ ಮಗುವನ್ನು ಪಡೆಯಬಹುದು. ''ಗರ್ಭಕೋಶದ ತೊಂದರೆ ಇರುವ ಮಹಿಳೆ ಗರ್ಭ ಧರಿಸಲಾಗದಿದ್ದಾಗ, ಗಂಡನ ವೀರ್ಯಾಣುವಿನಿಂದ ಫಲಿತ ಆಕೆಯ ಅಂಡಾಣುಗಳನ್ನು ಮತ್ತೊಬ್ಬ ಮಹಿಳೆಯ ಬಾಡಿಗೆ ಗರ್ಭಕೋಶದಲ್ಲಿಟ್ಟು ಮಗುವನ್ನು ಪಡೆಯಬಹುದಿದೆ. ಆದರೆ ಇಂಥಾ ಕರಾರಿಗೆ ಒಪ್ಪಿ ಮಧ್ಯೆ ಮಗುವನ್ನು ಕೊಡಲು ನಿರಾಕರಿಸಿದ ಕ್ಯಾಲಿಫೋರ್ನಿಯಾದ ಕಪ್ಪು ಮಹಿಳೆ ಅನಾ ಜಾನ್ಸನ್ ಕೇಸು ನೋಡುವಾಗ, ಗರ್ಭದಲ್ಲಿ ಹೊತ್ತವಳು ತಾಯಿಯೇ, ಅಂಡಾಣು ನೀಡಿದವಳು ತಾಯಿಯೇ ಎಂದು ತಾಯ್ತನದ ಹೊಸದೇ ನಿರ್ವಚನದ ಅಗತ್ಯವನ್ನು ವಿಜ್ಞಾನ ತೋರಿಸುತ್ತಿದೆ. ಆದರೆ ಹೆಣ್ಣಿನ ಗರ್ಭಕೋಶವೇ ಹಣ ಗಳಿಸುವ ಸರಕಿನ ರೂಪ ಪಡೆಯುವಾಗ, ಶ್ರೀಮಂತ ಹೆಣ್ಣುಗಳು ಬಸಿರು/ಹೆರಿಗೆಯ

ರೇಜಿಗೆಗೆ ಹೋಗದೆ ಬಡ ಹೆಂಗಸರ ಗರ್ಭಕೋಶವನ್ನು ಬಾಡಿಗೆಗೆ ಪಡೆಯಬಲ್ಲ ಸಾಧ್ಯತೆಯೇ ಸ್ತ್ರೀ ಶೋಷಣೆಯ ಹೊಸರೂಪವನ್ನು ತೋರುತ್ತದೆ.''[10] ಈ ರೀತಿಯಾಗಿ ವಿಜ್ಞಾನದ ಈ ಸಂಶೋಧನೆ ಒಂದು ಕಡೆ ಹೆಣ್ಣಿಗೆ ವರವಾದರೆ ಇನ್ನೊಂದು ಕಡೆ ಶಾಪವಾಗಿ ಪರಿಣಮಿಸಿದೆ.

ಹಾಗೆಯೇ ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿರುವ 'ಲಿವಿಂಗ್ ಟುಗೆದರ್' ಹೊಸ ಪರಿಕಲ್ಪನೆಯ ಬಗೆಗೆ 90ರ ದಶಕದಲ್ಲಿಯೇ ಸಾಹಿತ್ಯದಲ್ಲಿ ಚರ್ಚಿಸಿರುವುದು ಗಮನಾರ್ಹ. ನವ್ಯ ಸಾಹಿತಿಗಳಾದ ಶಾಂತಿನಾಥ ದೇಸಾಯಿವರ 'ಅಂತರಾಳ' ಕಾದಂಬರಿಯಲ್ಲಿ ಅಶ್ವಿನಿ ಮತ್ತು ವಸಂತ ಎಂಬ ಪಾತ್ರಗಳ ಮುಖೇನ 'ಲಿವಿಂಗ್ ಟುಗೆದರ್' ಪರಿಣಾಮಗಳ ಕುರಿತು ಅಭಿವ್ಯಕ್ತಿಸುತ್ತಾರೆ. ವಿವಾಹ, ಲೈಂಗಿಕ ಸ್ವಾತಂತ್ರ್ಯ, ವಿಚ್ಛೇದನ ಇವೆಲ್ಲವುಗಳನ್ನು ತಿರಸ್ಕರಿಸಿ ಇತ್ತೀಚೆಗೆ ಆರ್ಥಿಕವಾಗಿ ಸಬಲರಾದ ಹೆಣ್ಣು ಮಕ್ಕಳು ವಿವಾಹ ನಿರಾಕರಣೆಯನ್ನು ಮಾಡಿ ಒಂಟಿಜೀವನದ ಕಡೆ ಒಲವು ತೋರುತ್ತಿರುವುದನ್ನು ನಾವು ಇಂದಿನ ಆಧುನಿಕೋತ್ತರ ಯುಗದಲ್ಲಿ ಗಮನಿಸುತ್ತಿದ್ದೇವೆ. ಪುರುಷನ ಆಧಿಪತ್ಯ, ಪುರುಷಪ್ರಧಾನ ಸಮಾಜದ ಪರಿಕಲ್ಪನೆಯ ನಿರಾಕರಣೆಯು ಇದಕ್ಕೆ ಕಾರಣವಾಗಿರಬಹುದು.

ಹಾಗೆಯೇ ವಿವಾಹವಿಲ್ಲದೆ ಮಕ್ಕಳನ್ನು ಪಡೆಯುವ ಚಿಂತನೆ ಶಾಂತಿನಾಥ ದೇಸಾಯಿಯವರ 'ಮುಕ್ತಿ' ಕಾದಂಬರಿಯ ಡಾಲಿ ಪಾತ್ರದಲ್ಲಿ ಕಾಣುತ್ತೇವೆ. ದೇಸಾಯಿಯವರು ಮುಂದಿನ ಆಧುನಿಕ ಸಮಾಜದಲ್ಲಿ ಉಂಟಾಗಬಹುದಾದ ವಿವಾಹದ ಪರಿಕಲ್ಪನೆ, ಲೈಂಗಿಕ ಸ್ವಾತಂತ್ರ್ಯ, ವಿಚ್ಛೇದನ, ಸ್ವಾತಂತ್ರ್ಯ ಮತ್ತು ಸ್ವೇಚ್ಛಾಚಾರದ ಕುರಿತಾದ ಚರ್ಚೆಯನ್ನು 60 ರ ದಶಕದಲ್ಲಿಯೇ ತಮ್ಮ ಸಾಹಿತ್ಯದ ಮುಖೇನ ಮಾಡಿದ್ದಾರೆ. ''ಸ್ತ್ರೀ ಪುರುಷರಲ್ಲಿ ಸಾಮಾಜಿಕ ದೃಷ್ಟಿಯಿಂದ ಭೇದವಿಲ್ಲ. ಇಬ್ಬರಿಗೂ ಸಮಾನ ಸ್ವಾತಂತ್ರ್ಯ. ಪುರುಷನಂತೆ ಸ್ತ್ರೀಯೂ ಸಾಮಾಜಿಕ ಸಂಪತ್ತಿನ ವೃದ್ಧಿಯ ಸಲುವಾಗಿ ಕಾರ್ಯ ಮಾಡುವಳು. ಆರ್ಥಿಕ ದೃಷ್ಟಿಯಿಂದ ಸ್ತ್ರೀ ಸ್ವತಂತ್ರಳಾದ ನಂತರ ಸ್ತ್ರೀ ಪುರುಷರ ಸಂಬಂಧದ ಸ್ವರೂಪ ಬದಲಾಗುವುದು. ಸ್ತ್ರೀಯು ಪುರುಷನ ಆಳಾಗಿ ಉಳಿಯಲಾರಳು......ಅಂದರೆ ಲಗ್ನವಿಲ್ಲವೆಂದಲ್ಲ...... ಆದರೆ ಲಗ್ನದ ಸ್ವರೂಪ ಬದಲಾಗುವುದು. ಲಗ್ನವೆಂದರೆ ಮುಖ್ಯವಾಗಿ ಒಂದು ಬಗೆಯ ಸಾಮಾಜಿಕ contract ಕರಾರು – ಎಂಬ ಕಲ್ಪನೆ ರೂಢವಾಗುವುದು... ಪರಸ್ಪರ ಶ್ರದ್ಧೆ (ಬೇಕಾದರೆ 'ಪ್ರೇಮ' ಎಂದೆನ್ನು) ಕಡಿಮೆಯಾದರೆ ಘಟಸ್ಫೋಟ–ಅದರಲ್ಲೇನು? ಪುರುಷನಂತೆ ಸ್ತ್ರೀಗೂ ಲೈಂಗಿಕ ಸ್ವಾತಂತ್ರ್ಯವಿದೆ... ಇಬ್ಬರೂ ತಮ್ಮ ತಮ್ಮ ಜೀವನಕ್ಕೆ ತಾವೇ ಜವಾಬುದಾರರು.''[11] ಈ ರೀತಿಯಾಗಿ ತಮ್ಮ ಜೀವನವನ್ನು ತಾವು ಬಯಸಿದಂತೆ ಬದುಕಬೇಕೆಂಬ ಆಸೆ, ಗಂಡಿನ ಆಸರೆ, ಆಶ್ರಯ, ಸಾಂಗತ್ಯ ಎಲ್ಲವನ್ನೂ ನಿರಾಕರಿಸುತ್ತಿರುವ ಒಂದು ಹೊಸ ಚಿಂತನೆ ಇತ್ತೀಚಿನ ಸ್ತ್ರೀ ವಲಯದಲ್ಲಿ ಬೆಳೆಯುತ್ತಿದೆ. ಮಾತ್ರವಲ್ಲ ಪುರುಷನ ಸಾಂಗತ್ಯವನ್ನು ನಿರಾಕರಿಸಿ ವಿಜ್ಞಾನದ ಹೊಸ ಆವಿಷ್ಕಾರದ ಮೂಲಕ ಸ್ತ್ರೀಯರು ಮಕ್ಕಳನ್ನು ಪಡೆಯುತ್ತಿದ್ದಾರೆ. ಇದೆಲ್ಲವೂ ಆಧುನಿಕೋತ್ತರ ಭಾರತದಲ್ಲಿ ನಡೆಯುತ್ತಿರುವ ಹೊಸ ಸಂಚಲನಗಳು. ಆಧುನಿಕೋತ್ತರವೆನ್ನುವುದು ಮಾನಸಿಕವಾಗಿ, ದೈಹಿಕವಾಗಿ, ಭಾವನಾತ್ಮಕವಾಗಿ ಹೆಣ್ಣನ್ನು ಪ್ರಬಲಗೊಳಿಸುತ್ತಿರುವ ವಿಶಿಷ್ಟ ಸಂಸ್ಕೃತಿಯೂ ಆಗಿದೆ.

ಕೈಗಾರೀಕರಣ, ಜಾಗತೀಕರಣ, ಬಂಡವಾಳಶಾಹಿ ಜಗತ್ತು, ವಾಣಿಜ್ಯೋದ್ಯಮಗಳೆಲ್ಲ ಆಧುನಿಕೋತ್ತರದ ರೂಪ. ಜಾಗತೀಕರಣದ ಭರಾಟೆಯಲ್ಲಿ ಇಂದು ಜಗತ್ತು ಅಂಗೈ ಅಗಲದಷ್ಟಾಗಿದೆ. ಬಂಡವಾಳ ಶಾಹಿಯ ಆಕ್ರಮಣ ಸ್ವಭಾವದಿಂದಾಗಿ ಕೊಳ್ಳುಬಾಕ ಸಂಸ್ಕೃತಿ ಬೆಳೆದಿದೆ. ಅವಶ್ಯಕತೆಯಿದೆಯೋ ಇಲ್ಲವೋ, ಎಲ್ಲವೂ ತನ್ನಲ್ಲಿರಬೇಕು ಎನ್ನುವ ಲೋಭಿತನ ಬೆಳೆಯುತ್ತಿದೆ. ಇದಕ್ಕೆ ಆಸೆ–ಪ್ರಲೋಭನೆಗಳನ್ನು ಈ ಕೊಳ್ಳುಬಾಕ ಸಂಸ್ಕೃತಿಯು ತೋರಿಸುತ್ತಿದೆ.

ಈ ಕುರಿತು ಹಿರಿಯ ಲೇಖಕಿ ವೈದೇಹಿಯವರು "ಒಳ್ಳೆ ಸಮಯ ಒಳ್ಳೆ ಸಮಯ ಕೊಳ್ಳೆ ಸಮಯವೂ" ಎನ್ನುವ ಲೇಖನದಲ್ಲಿ ಇಂದು ನಾವು ಎಂತಹ ಪರಿಸ್ಥಿತಿಯಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ವಸ್ತುನಿಷ್ಠವಾಗಿ, ವ್ಯಂಗ್ಯಾತ್ಮಕವಾಗಿ ಹೇಳುತ್ತಾ ನಮ್ಮನ್ನೆಲ್ಲ ಗಂಭೀರ ಚಿಂತನೆಯಲ್ಲಿ ಮುಳುಗಿಸುತ್ತಾರೆ. ಟಿ.ವಿ ಮಾಧ್ಯಮದಲ್ಲಿ ಅತ್ಯಂತ ಗಂಭೀರ ವರದಿ ಬಿತ್ತರವಾಗುತ್ತಿರುವಾಗಲೇ ಚಲ್ಲುಚಲ್ಲು ಜಾಹೀರಾತು, ಮುಜುಗುರ ಹುಟ್ಟಿಸುವಂತಹ ಜಾಹೀರಾತುಗಳು ಬಿತ್ತರವಾಗುತ್ತಿರುವುದನ್ನು ಈ ಲೇಖನದಲ್ಲಿ ಚರ್ಚಿಸುವಾಗ ಹಣ ಮಾಡುವ ಭರಾಟೆಯಲ್ಲಿ ಮಾನವೀಯತೆ, ನೈತಿಕತೆಯನ್ನು ಕಳೆದುಕೊಳ್ಳುತ್ತಿರುವ ಸೂಚನೆಯಿದೆ. ಇದು ನಮ್ಮ ಸಾಮಾಜಿಕ, ನೈತಿಕ ಅಧಃಪತನಕ್ಕೆ ದೊಡ್ಡ ಹೊಡೆತವೆಂಬಂತೆ ಭಾಸವಾಗುತ್ತದೆ. "ಚಾನಲ್ ಬದಲಿಸಿ ನೋಡಿ. ಅಲ್ಲಿ ಇನ್ನೊಂದು ಸ್ಟೋರೀ–ಅಲ್ಲೊಬ್ಬ ವ್ಯಕ್ತಿಯನ್ನು ಕೊಂದು ಕಾಲುವೆಗೆ ಎಸೆದಿದ್ದಾರೆ. ಆತ ಅದುವರೆಗೆ ನೆಲೆಸಿದ್ದ ದೇಹ ಯಾವ ಘನತೆಯ ಮರೆಯಿಲ್ಲದೆ ತೀರದಲ್ಲಿ ಎತ್ತಿ ಹಾಕಿದಂತಹ ಸ್ಥಿತಿಯಲ್ಲೇ ಇದೆ. ಮೈಕ್ ಅವನ ಹೆಂಡತಿಯೆದುರು ಮಕ್ಕಳೆದುರು ನಿಂತು ಪ್ರಶ್ನೆ ಕೇಳುತ್ತಿದೆ. ಅವರೆಲ್ಲ ಉತ್ತರ ಹೇಳುತ್ತಿದ್ದಾರೆ......ಅಲ್ಲಿಗೆ ಅದು ಗರಕ್ಕ ನಿಂತು– 'ನನಗೊಂದು ಹನಿ ಕೊಡುವಿಯ?' ಶೇವಿಂಗ್ ಬ್ರಶ್ ಹಿಡಿದು ಸಾಲುಸಾಲಾಗಿ ಜನ (ಗಂಡಸರು) ನಿಂತಿದ್ದಾರೆ. ಸಾವಿನ ಸುದ್ದಿ ಸಾಯಲಿ ಅತ್ತ. ಶೇವಿಂಗ್ ಕ್ರೀಂ ಕೊಂಡರೆ ಇದನ್ನೆ ಕೊಳ್ಳಬೇಕು ಅಂತ ಶೇವಿಂಗ್ ಅಗತ್ಯವೇ ಇಲ್ಲದವರಿಗೂ ಅನಿಸಬೇಕು ಹಾಗೇ!"[12]

ಹಾಗೆಯೇ ಆತ್ಮಹತ್ಯೆ ಮಾಡಿಕೊಂಡ ರೈತನ ಕುರಿತು ವರದಿಯನ್ನು ತೋರಿಸುತ್ತಾ ನಡುವೆ ಬ್ರೇಕ್ ಸಮಯದಲ್ಲಿ ತಲೆಯ ಹೊಟ್ಟಿನ ಕುರಿತು ಜಾಹಿರಾತು ತೋರಿಸುವುದು ಇವುಗಳ ಕುರಿತಾಗಿ ಲೇಖಕಿ ಬರೆಯುತ್ತಿರುವಾಗ ಆಧುನೀಕರಣ, ವಾಣಿಜ್ಯೀಕರಣಗಳು ವ್ಯಕ್ತಿಯ ಸಾವಿನಲ್ಲೂ ತಮ್ಮ ಲಾಭದತ್ತವೇ ಗಮನ ಕೇಂದ್ರೀಕೃತಗೊಳಿಸುತ್ತಿರುವುದು ಮನುಷ್ಯ ಸಮಾಜಕ್ಕೆ ಹೇಯವೆನಿಸುವಂತಿದೆ. ಮಾತ್ರವಲ್ಲ ಪ್ರಕೃತಿದತ್ತವಾದ ಕುಡಿಯುವ ನೀರನ್ನೂ ವ್ಯಾಪಾರೀಕರಣಗೊಳಿಸಿರುವುದು ಬಂಡವಾಳ ಶಾಹಿಯ ಅತಿಕ್ರಮಣವನ್ನು ಸೂಚಿಸುತ್ತದೆ. ಇವೆಲ್ಲ ಮುಗ್ಧ ಜನರನ್ನು ತಮ್ಮ ಲಾಭದಾಯತ್ವಕ್ಕೆ ಬಲಿಪಶು ಮಾಡುತ್ತಿರುವುದನ್ನು ಸೂಚಿಸುತ್ತವೆ. ನೇಮಿಚಂದ್ರ ಅವರ 'ನೀರು ಕೊಡದ ನಾಡಿನಲ್ಲಿ' ಲೇಖನ ಈ ಕುರಿತು ತುಂಬಾ ಸೊಗಸಾಗಿ ಚಿತ್ರಿಸುತ್ತದೆ "ಭಾರತದಿಂದ ಹೊರಗೆ ಕಾಲಿಟ್ಟರೆ, ಉಳಿದೆಲ್ಲವೂ 'ನೀರು ಕೊಡದ ನಾಡುಗಳೇ' ಎಂಬುದು ನನ್ನ ಇಲ್ಲಿಯವರೆಗಿನ ಅನುಭವ. ಎರಡು ವಾರ ಕಳೆದಿದೆ. ಊರೂರು ಅಲೆದದ್ದಾಯಿತು. ದಿನವೂ ಅಸಾಧ್ಯ ಬಾಯಾರಿಕೆ, ಕೋಲಾಗಳು, ಫ್ರೆಂಚ್ ವೈನ್/ ಬೀಯರ್, ಬಾಟಲಿಯಲ್ಲಿ ಹಣ್ಣಿನ ರಸ, ಧಾರಾಳವಾಗಿ ದೊರೆಯುತ್ತವೆ. ಕುಡಿಯಲು ನೀರು ಸಿಗದು,"[13] ಪುಕ್ಕಟೆಯಾಗಿ ಏನನ್ನೂ ಕೊಡದಿದ್ದರೆ, ನೀವು ಕೊಳ್ಳುತ್ತೀರಿ. ಕೊಳ್ಳುತ್ತಿರುವುದು ಸೀದಾಸಾದಾ ಅಲ್ಲ' ಎಂದು ನಂಬಿಸಿದರೆ ಮತ್ತಷ್ಟು ಕೊಳ್ಳುತ್ತೀರಿ. 'ಕೊಳ್ಳುತ್ತಿರುವುದು ಅದ್ಭುತವಾದದ್ದು' ಎಂದರೆ ಇನ್ನಷ್ಟು ಕೊಳ್ಳುತ್ತೀರಿ. ಕೊಳ್ಳುಬಾಕ ಸಂಸ್ಕೃತಿಯ ತಳಹದಿಯೇ ಇಲ್ಲಿದೆ. ನೀರು ನಿಮಗೆ ಧಾರಾಳವಾಗಿ ಎಲ್ಲೆಡೆ ಪುಕ್ಕಟೆ ದೊರೆತರೆ, ಕೋಲಾ ಕಂಪನಿಗಳು ಜಾಹೀರಾತುಗಳಿಗೆ ಮಣಿಯುವುದು ಹೇಗೆ? ಇದು ಒಂದು ಬಗೆಯ ಸೂಕ್ಷ್ಮ ರೀತಿಯ 'ಸೈಕಾಲಜಿಕಲ್ ವಾರ್ ಫೇರ್."[14] ಇವೆಲ್ಲ ಬಂಡವಾಳಶಾಹಿಯ ಲಾಭಕೋರತನದ ಕುತಂತ್ರಗಳು. ಹಾಗೆಯೇ ಮನೆಯ ಹಿತ್ತಲ, ಬಾತ್ ರೂಂ, ಅಡಿಗೆ ಮತ್ತು ಡೈನಿಂಗ್, ಡ್ರೆಸ್ಸಿಂಗ್ ರೂಂ, ವಾರ್ಡ್ರೋಬ್, ದೇವರಕೋಣೆ, ಪಡಸಾಲೆ, ವರಾಂಡಾ ಹೀಗೆ ಹೆಣ್ಣುಮಕ್ಕಳ ಬದುಕನ್ನು ಹಗುರಗೊಳಿಸಿರುವ ಒಂದು ದೊಡ್ಡ ಪಟ್ಟಿಯನ್ನೇ ಸವಿತಾ ನಾಗಭೂಷಣ ತಮ್ಮ 'ಅಯ್ಯೋ ಶಿವನೇ' ಕವನದಲ್ಲಿ ನೀಡುತ್ತಾರೆ. ಆದರೆ ಇಡೀ ಕವನದ ಆಶಯವೆಂದರೆ ಏನೇ

ಅವಕಾಶ, ಸೌಲಭ್ಯಗಳಿದ್ದರೂ ಮನುಷ್ಯನಿಗೆ ಕೊನೆಯಲ್ಲಿ ಬೇಕಾದದ್ದು ನೆಮ್ಮದಿ, ಶಾಂತಿ. ಕವಯತ್ರಿ ಅದನ್ನು ಪ್ರಕೃತಿಯಲ್ಲಿ ಕಂಡುಕೊಂಡಿದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳ ಸಂದೀಲಿ ಚೂರೇ ಚೂರು ಆಕಾಶ ಕಾಣ್ತಾ ಇದೆ/ ಅದರಲ್ಲೇ ಒಂಚೂರು ಚಂದ್ರ ಬೆಳಗತಾ ಅವನೆ/ ಹಾಗೇ ಒಂದು ಗಳಿಗೆ ನೋಡ್ತಾನೆ ನಿಲ್ತಿನಿ/ ಏನೋ ಒಂಥರಾ ನೆಮ್ಮದಿ, ಅಸೀಮ ಶಾಂತಿ!!/ ಶಾಂತೀ! ಶಾಂತಿ! ಶಾಂತಿ![15] ಈ ರೀತಿಯಾಗಿ ಬದಲಾಗುತ್ತಿರುವ ಆಧುನಿಕೋತ್ತರ ಸಮಾಜದ ಬಹುತೇಕ ಅಂಶಗಳು ಕನ್ನಡ ಸಾಹಿತ್ಯದಲ್ಲಿ ಅವಲೋಕಿಸಿ ಚರ್ಚಿಸಲ್ಪಟ್ಟಿವೆ. ಪರಂಪರೆಗೆ ಧಕ್ಕೆಯನ್ನು ತರಲಾರದೆ ಆಧುನಿಕತೆಯನ್ನು ಮೈಗೂಡಿಸಿಕೊಳ್ಳಬೇಕಾದ ಅವಶ್ಯಕತೆಯಿರುವುದನ್ನು, ಆರೋಗ್ಯಕರ ಸಮಾಜಕ್ಕೆ ಪೂರಕವಾಗಿ ನಾವು ಬದುಕಬೇಕಾದ ಅವಶ್ಯಕತೆಯಿರುವುದನ್ನು ಕನ್ನಡ ಸಾಹಿತ್ಯ ಹೇಳುತ್ತದೆ.

"ಹೇಳಿ, ಕಾಯ್ದು ಕೊಳ್ಳಬಲ್ಲೆವೇ ಮಾನವೀಯ ಮೌಲ್ಯಗಳನ್ನು, ಕೊಳ್ಳುಬಾಕುತನದ ಕಪಿ ಮುಷ್ಠಿಯಿಂದ ಬಿಡಿಸಿಕೊಳ್ಳಬಲ್ಲೆವೆ? ಬಾಯಾರಿದವನಿಗೆ ನೀರು ಕೊಡಬಲ್ಲೆವೆ? ಹಸಿದವನಿಗೆ ಅನ್ನ ಕೊಡಬಲ್ಲೆವೆ? ಇನ್ನೊಬ್ಬರ ನೀರು-ಅನ್ನವನ್ನು ಕಸಿದುಕೊಳ್ಳದೆ ಬದುಕಬಲ್ಲೆವೆ? ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವ ಅಸ್ತ್ರ, ನಮ್ಮ ಕೈಯಲ್ಲೇ ಇದೆಯಲ್ಲವೇ?"[16] ಎಂದು ನೇಮಿಚಂದ್ರ ಅವರು ಎತ್ತುವ ಪ್ರಶ್ನೆ ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ತನ್ನ ಮೂಲ ಬೇರನ್ನು, ತನ್ನ ನೆಲದ ಅಂತಃಸತ್ವವನ್ನು ಬಿಟ್ಟು ಕೊಡಬಾರದೆಂಬ ವಾಸ್ತವ ಪ್ರಜ್ಞೆಯನ್ನು ಬಡಿದೆಚ್ಚರಿಸುತ್ತದೆ. ಈ ರೀತಿಯಾಗಿ ಕನ್ನಡ ಸಾಹಿತ್ಯ ಯಾವಾತ್ತಿಗೂ ಪರಂಪರೆ-ಆಧುನಿಕತೆ-ಆಧುನಿಕೋತ್ತರ ಸಮಾಜಕ್ಕೆ ಕೊಂಡಿಯಾಗಿ ಕೆಲಸ ಮಾಡಿದೆ.

**ಕೊನೆ ಟಿಪ್ಪಣಿಗಳು:**

1. ರಾಘವೇಂದ್ರರಾವ್ ಎಚ್. ಎಸ್., (1989), ನಿಲುವು, ಬೆಂಗಳೂರು: ಕನ್ನಡ ಸಂಘ (ಕ್ರೈಸ್ಟ್ ಕಾಲೇಜ್), ಪುಟ: 256.
2. ಕೀರ್ತಿನಾಥ ಕುರ್ತಕೋಟಿ, (1989), ಸಂಸ್ಕೃತಿ ಸ್ಪಂದನ, ಧಾರವಾಡ: ಮನೋಹರ ಗ್ರಂಥಮಾಲೆ, ಪುಟ: 5.
3. ಅಶೋಕ ಟಿ. ಪಿ., (1990), ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ, ಪುತ್ತೂರು: ಕರ್ನಾಟಕ ಸಂಘ, ಪುಟ: 5.
4. ಅಶೋಕ ಟಿ. ಪಿ., (1990), ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ, ಪುತ್ತೂರು: ಕರ್ನಾಟಕ ಸಂಘ, ಪುಟ: 6–7.
5. ಕರಿಗೌಡ ಬೀಚನಹಳ್ಳಿ, (1992), ಕನ್ನಡ ಕಥನ ಕಲೆಯ ನೆಲೆಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ: 39.
6. ಅಶೋಕ ಟಿ. ಪಿ., (1990), ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ, ಪುತ್ತೂರು: ಕರ್ನಾಟಕ ಸಂಘ, ಪುಟ: 100.
7. ಕೀರ್ತಿನಾಥ ಕುರ್ತಕೋಟಿ, (1989), ಸಂಸ್ಕೃತಿ ಸ್ಪಂದನ, ಧಾರವಾಡ: ಮನೋಹರ ಗ್ರಂಥಮಾಲೆ, ಪುಟ: 5.
8. ರಹಮತ್ ತರೀಕೆರೆ, ಕನ್ನಡ ಅಧ್ಯಯನ (ಗಾಳಿ ಸಂಚಿಕೆ), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪುಟ: II & III.
9. ನೇಮಿಚಂದ್ರ, (2022), ತೆರೆದ ಮನ (ಸಂ. ದೇವಿಕಾ ನಗರಕರ ಮತ್ತು ಶಿವಾನಂದ ಹೊಸಮನಿ), ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 110.
10. ನೇಮಿಚಂದ್ರ, (2022), ತೆರೆದ ಮನ (ಸಂ. ದೇವಿಕಾ ನಗರಕರ ಮತ್ತು ಶಿವಾನಂದ ಹೊಸಮನಿ), ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 119.
11. ಶಾಂತಿನಾಥ ದೇಸಾಯಿ, (1961), ಮುಕ್ತಿ, ಧಾರವಾಡ: ಮನೋಹರ ಗ್ರಂಥಮಾಲೆ, ಪುಟ: 146.

12. ವೈದೇಹಿ, (2017), ಸಾಹಿತ್ಯ ಸ್ಪಂದನ-4 (ಸಂ. ಶಶಿಕಲಾ ಮೊರಬದ), ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 53.
13. ನೇಮಿಚಂದ್ರ, ಸಾಹಿತ್ಯ ಸ್ಪಂದನ-1, ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 105.
14. ನೇಮಿಚಂದ್ರ, ಸಾಹಿತ್ಯ ಸ್ಪಂದನ-1, ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 104-105.
15. ಸವಿತಾ ನಾಗಭೂಷಣ, (2022), ಸಾಧನೆಗೆ ಕೊನೆಯಿಲ್ಲ (ಲೇಖನ: ಅಯ್ಯೋ ಶಿವನೇ), ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 104.
16. ನೇಮಿಚಂದ್ರ, ಸಾಹಿತ್ಯ ಸ್ಪಂದನ-1, ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪುಟ: 109.

## ಪರಾಮರ್ಶನ ಗ್ರಂಥಗಳು:


1. ರಾಘವೇಂದ್ರರಾವ್ ಎಚ್. ಎಸ್., (1989), ನಿಲುವು, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್.
2. ಕೀರ್ತಿನಾಥ ಕುರ್ತಕೋಟಿ, (1989), ಸಂಸ್ಕೃತಿ ಸ್ಪಂದನ, ಧಾರವಾಡ: ಮನೋಹರ ಗ್ರಂಥಮಾಲೆ.
3. ಅಶೋಕಟಿ. ಪಿ., (1990), ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ, ಪುತ್ತೂರು: ಕರ್ನಾಟಕ ಸಂಘ.
4. ಕರಿಗೌಡ ಬೀಚನಹಳ್ಳಿ, (1992), ಕನ್ನಡ ಕಥನ ಕಲೆಯ ನೆಲೆಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
5. ರಹಮತ್ ತರೀಕೆರೆ, ಕನ್ನಡ ಅಧ್ಯಯನ (ಗಾಳಿ ಸಂಚಿಕೆ), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ದೇವಿಕಾ ನಗರಕರ ಮತ್ತು ಶಿವಾನಂದ ಹೊಸಮನಿ (ಸಂ), (2022), ತೆರೆದ ಮನ, ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ.
7. ಶಾಂತಿನಾಥ ದೇಸಾಯಿ, (1961), ಮುಕ್ತಿ, ಧಾರವಾಡ: ಮನೋಹರ ಗ್ರಂಥಮಾಲೆ.
8. ಶಶಿಕಲಾ ಮೊರಬದ (ಸಂ), (2017), ಸಾಹಿತ್ಯ ಸ್ಪಂದನ-4, ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ.
9. ಶಕುಂತಲಾ ನಾವಲಗಿ, (2022), ಸಾಧನೆಗೆ ಕೊನೆಯಿಲ್ಲ, ಬೆಳಗಾವಿ: ಪ್ರಸಾರಾಂಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.